ಆ) ಹಳೇಬೀಡು ದ್ವಾರ ಸಮುದ್ರ ಮತ್ತು ಬೇಲೂರು ವಿಶ್ವ ಸಮುದ್ರ ಕರೆಗಳಲ್ಲಿ ಪ್ರವಾಸಿಗರಿಗೆ ದೋಣಿ ವಿಹಾರ ಒದಗಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು?

ಶ್ರೀ ಆರ್. ರೋಷನ್ ಬೇಗ್ (ಪ್ರವಾಸೋದ್ಯಮ ಹಾಗೂ ಹಜ್ ಸಚಿವರು) :

ಅ) ಬೇಲೂರು ತಾಲ್ಲೂಕಿನ ಹಳೇಬೀಡು ಮತ್ತು ಬೇಲೂರು ಪ್ರವಾಸಿ ಕೇಂದ್ರಗಳ ರಸ್ತೆ ಅಭಿವೃದ್ಧಿಗೆ ಸಂಬಂಧಪಟ್ಟ ಪ್ರಸ್ತಾವನೆ ಸರ್ಕಾರದ ಮುಂದಿದೆ.

ಆ) ಬೇಲೂರಿನ ವಿಶ್ವ ಸಮುದ್ರ ಹಾಗೂ ಹಳೇಬೀಡಿನ ದ್ವಾರ ಸಮುದ್ರಗಳಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ಇರುತ್ತದೆ ಇನ್ನಿತರ ಕಾಲದಲ್ಲಿ ನೀರು ಲಭ್ಯವಿರುವುದಿಲ್ಲ. ಆದುದರಿಂದ ದೋಣಿ ವಿಹಾರ ಒದಗಿಸಲು ಇಲಾಖೆಯಿಂದ ಕ್ರಮ ಕೈಗೊಂಡಿರುವುದಿಲ್ಲ.

ಬೇಲೂರು ತಾಲ್ಲೂಕಿನಲ್ಲಿ ಆನೆ ತುಳಿತಕ್ಕೆ ಒಳಗಾದವರಿಗೆ ಪರಿಹಾರ

1306 (1859) ಶ್ರೀ ಪುಟ್ಟರಂಗನಾಥ್, ಎಸ್. ಹೆಚ್. (ಬೇಲೂರು): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೇಲೂರು ತಾಲ್ಲೂಕಿನಲ್ಲಿ ಆನೆತುಳಿತಕ್ಕೆ ಒಳಗಾದರವರ ಸಂಖ್ಯೆ ಎಷ್ಟು? ಹಾಗೂ ಅವರಿಗೆ ಪರಿಹಾರ ನೀಡಲಾಗಿದೆಯೆ?

ಆ) ಚಿರತೆ ಆಕ್ರಮಣದಿಂದ ಪ್ರಾಣ ಕಳೆದುಕೊಂಡವರು ಹಾಗೂ ಗಾಯಗೊಂಡವರ ಸಂಖ್ಯೆ ಎಷ್ಟು? ಹಾಗೂ ಅವರಿಗೆ ಪರಿಹಾರ ನೀಡಲಾಗಿದೆಯೆ?

ಇ) ಚಿರತೆ ಹಾವಳಿಯಿಂದ ಮೃತಪಟ್ಟ ಸಾಕುಪ್ರಾಣಿಗಳ ಸಂಖ್ಯೆ ಎಷ್ಟು?

ಈ) ಇದಕ್ಕೆ ಒದಗಿಸಲಾದ ಪರಿಹಾರ ಏನು?

ಶ್ರೀ ಕೆ. ಎಚ್. ರಂಗನಾಥ್ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಸಚಿವರು) :

ಅ) 1999-2000ನೇ ಸಾಲಿನಲ್ಲಿ ಬೇಲೂರು ತಾಲ್ಲೂಕಿನಲ್ಲಿ ಒಬ್ಬ ಮಹಿಳೆ ದಿನಾಂಕ 10-11-99 ರಂದು ಆನೆ ತುಳಿತದಿಂದ ಮೃತಪಟ್ಟಿರುತ್ತಾರೆ. ಈ ಬಗ್ಗೆ ರೂ. 1.00 ಲಕ್ಷ ಪರಿಹಾರವನ್ನು ಮಂಜೂರು ಮಾಡಿದ್ದು ಇದರಲ್ಲಿ ರೂ. 75,000-00ನ್ನು ಈಗಾಗಲೇ ವಾರಸುದಾರರಿಗೆ ನೀಡಲಾಗಿದೆ. ಉಳಿದ ರೂ. 25,000-00ನ್ನು ದಿನಾಂಕ 31-3-2000ರಂದು ಪಾವತಿಸಲಾಗಿದೆ. ಅಲ್ಲದೆ, ಎರಡು ಜನರು ಗಾಯಗೊಂಡಿದ್ದು ಇವರಿಗೆ ರೂ. 4000-00 ಪರಿಹಾರಧನವನ್ನು ವಿತರಿಸಿದೆ.

ಆ) 1999-2000ನೇ ಸಾಲಿನಲ್ಲಿ ಇಂತಹ ಪ್ರಕರಣಗಳು ಸಂಭವಿಸಿರುವುದಿಲ್ಲ

ಇ) ಐದು ಪ್ರಕರಣಗಳು ಸಂಭವಿಸಿದೆ.

ಈ) ಸದರಿ ಐದು ಪ್ರಕರಣಗಳಲ್ಲಿ ಸಾಕುಪ್ರಾಣಿಗಳ ಮಾಲೀಕರಿಗೆ ರೂ. 4450-00 ಪರಿಹಾರ ನೀಡಲಾಗಿದೆ.